# ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕರ್ನಾಟಕ

ನಂ:1/14, ನೆಲಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027

ದಿನಾಂಕ: 31/03/2018

## ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸಬಯಸುವುದೇನೆಂದರೆ, ದಿನಾಂಕ 01.05.2017 ರಿಂದ ಎಲ್ಲಾ ongoing ಮತ್ತು New Project ಗಳನ್ನು ಕಡ್ಡಾಯವಾಗಿ ರಿಯಲ್ ಎಸ್ಟೇಟ್ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 3ರ ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕಾಗಿರುತ್ತದೆ. ಅದರಂತೆ ಎಲ್ಲಾ ಏಜೆಂಟರು ಕೂಡ ಕಡ್ಡಾಯವಾಗಿ ತಮ್ಮ ಹೆಸರು ಹಾಗೂ ತಮ್ಮ ಕಂಪನಿ/ಸಂಸ್ಥೆಯನ್ನು/ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕಾಗಿದೆ.

ಹಾಗೆ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದಾಗ ಪ್ರಾಧಿಕಾರದಿಂದ ತಾತ್ಕಾಲಿಕವಾಗಿ Provisional Registration No:PR/KN/Applied date/No:..... & AG/KN/Applied date/No..... ಎಂದು ಅನುಕ್ರಮವಾಗಿ ಡೆವಲಪರ್ ಹಾಗೂ ಏಜೆಂಟರಿಗೆ ಇದುವರೆವಿಗೂ ಕೊಡಲಾಗುತ್ತಿತ್ತು. ಆದರೆ ಆ Provisional Registration ನಂಬರನ್ನು ಬಳಸಿ ಡೆವಲಪರ್ ಮತ್ತು ಏಜೆಂಟರು ತಮ್ಮ ತಮ್ಮ ವ್ಯವಹಾರಗಳನ್ನು ನಡೆಸುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ/ ನಿರ್ದಿಷ್ಟವಾಗಿ ಗ್ರಾಹಕರಿಗೆ ತಿಳಿಸುವುದೇನೆಂದರೆ ಇನ್ನು ಮುಂದೆ ದಿನಾಂಕ 1/04/2018 ನಂತರದಿಂದ ನೋಂದಣಿಗಾಗಿ ಅರ್ಜಿ ಸಲ್ಲಿಸುವ ಡೆವಲಪರ್/ಏಜೆಂಟರಾಗಲೀ ಅರ್ಜಿ ಸಲ್ಲಿಸಿದ ನಂತರ ಪ್ರಾಧಿಕಾರದಿಂದ ಖಾಯಂ ನೋಂದಣಿಗಾಗಿ ಅನುಮೋದನೆ ಪಡೆದುಕೊಳ್ಳದ ಹೊರತು ತಮ್ಮ ಯೋಜನೆಗಳ ಬಗ್ಗೆ ಪ್ರಚಾರ ಮಾಡುವುದಾಗಲೀ/ ಒಪ್ಪಂದ ಪತ್ರ ಮಾಡಿಕೊಳ್ಳುವುದಾಗಲೀ, ಶೇ 10% ಕ್ಕಿಂತ ಹೆಚ್ಚಿನ ಮುಂಗಡ ಹಣವನ್ನು ಸಂಗ್ರಹಿಸುವುದಾಗಲಿ ಮಾಡಲು ಬರುವುದಿಲ್ಲ. ಹಾಗೆ ಮಾಡಿದಲ್ಲಿ ರೇರಾ ಕಾಯ್ದೆ ಕಲಂ 3 ನ್ನು ಉಲ್ಲಂಘಿಸಿದಂತಾಗುತ್ತದೆ. ಆದ್ದರಿಂದ ಈ ಮೂಲಕ ಎಲ್ಲಾ ಡೆವಲಪರ್/ ಏಜೆಂಟ್/ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ತಾತ್ಕಾಲಿಕ ನೋಂದಣಿ ಸಂಖ್ಯೆಯ ಮೇಲೆ ಯಾರೂ ಕೂಡ ವ್ಯವಹರಿಸಲು ಬರುವುದಿಲ್ಲ. ಪ್ರಾಧಿಕಾರಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪ್ರಾಧಿಕಾರವು ಪರಿಶೀಲಿಸಿ ಅನುಮೋದನೆ ನೀಡಿದಾಗ PRM/KA/RERA/Dist/Taluk/AG/Approved Date/No:.......... ಹಾಗೂ PRM/KA/RERA/Dist/Taluk/PR/Approved Date/No:........... ಎಂದು ಅನುಕ್ರಮವಾಗಿ ಡೆವಲಪರ್/ ಏಜೆಂಟರುಗಳಿಗೆ ನೋಂದಣಿ ಸಂಖ್ಯೆ ಕೊಡಲಾಗುವುದು. ಅದನ್ನು ಖಚಿತಪಡಿಸಿಕೊಂಡ ನಂತರವೇ ಸಾರ್ವಜನಿಕರು ವ್ಯವಹಾರ ಮಾಡಬೇಕಾಗಿರುತ್ತದೆ.

ಕಾರ್ಯದರ್ಶಿಗಳು
ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ಬೆಂಗಳೂರು

# ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕರ್ನಾಟಕ

ನಂ:1/14, ನೆಲಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027

ದಿನಾಂಕ: 02/04/2018

## ಪತ್ರಿಕಾ ಪ್ರಕಟಣೆ ಸ್ಪಷ್ಟೀಕರಣ

ಈ ಮೂಲಕ ಸಾರ್ವಜನಿಕರಿಗೆ ತಿಳಿಸಬಯಸುವುದೇನೆಂದರೆ, ದಿನಾಂಕ 01.05.2017 ರಿಂದ ಎಲ್ಲಾ ongoing ಮತ್ತು New Project ಗಳನ್ನು ಕಡ್ಡಾಯವಾಗಿ ರಿಯಲ್ ಎಸ್ಟೇಟ್ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 3ರ ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕಾಗಿರುತ್ತದೆ. ಅದರಂತೆ ಎಲ್ಲಾ ಏಜೆಂಟರು ಕೂಡ ಕಡ್ಡಾಯವಾಗಿ ತಮ್ಮ ಹೆಸರು ಹಾಗೂ ತಮ್ಮ ಕಂಪನಿ/ಸಂಸ್ಥೆಯನ್ನು/ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕಾಗಿದೆ.

ಹಾಗೆ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದಾಗ ಪ್ರಾಧಿಕಾರದಿಂದ ಸ್ವೀಕೃತಿ ಸಂಖ್ಯೆ (Acknowledgement No) No:PR/KN/Applied date/No:..... & AG/KN/Applied date/No..... ಎಂದು ಅನುಕ್ರಮವಾಗಿ ಡೆವಲಪರ್ ಹಾಗೂ ಏಜೆಂಟರಿಗೆ ಇದುವರೆವಿಗೂ ಕೊಡಲಾಗುತ್ತಿತ್ತು. ಆದರೆ ಆ ಸ್ವೀಕೃತಿ ಸಂಖ್ಯೆ (Acknowledgement No) ಬಳಸಿ ಡೆವಲಪರ್ ಮತ್ತು ಏಜೆಂಟರು ತಮ್ಮ ತಮ್ಮ ವ್ಯವಹಾರಗಳನ್ನು ರೇರಾ ನೋಂದಣಿ Approval ಆಗುವ ಮುಂಚಿತವಾಗಿ ನಡೆಸುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ/ ನಿರ್ದಿಷ್ಟವಾಗಿ ಗ್ರಾಹಕರಿಗೆ ತಿಳಿಸುವುದೇನೆಂದರೆ, ದಿನಾಂಕ 1/04/2018 ನಂತರದಿಂದ ನೋಂದಣಿಗಾಗಿ ಅರ್ಜಿ ಸಲ್ಲಿಸುವ ಡೆವಲಪರ್/ಏಜೆಂಟರಾಗಲೀ ಅರ್ಜಿ ಸಲ್ಲಿಸಿದ ನಂತರ ಪ್ರಾಧಿಕಾರದಿಂದ ಖಾಯಂ ನೋಂದಣಿಗಾಗಿ ಅನುಮೋದನೆ ಪಡೆಯದೆ ತಮ್ಮ ಯೋಜನೆಗಳ ಬಗ್ಗೆ ಪ್ರಚಾರ ಮಾಡುವುದಾಗಲೀ/ ಒಪ್ಪಂದ ಪತ್ರ ಮಾಡಿಕೊಳ್ಳುವುದಾಗಲೀ, ಶೇ 10% ಕ್ಕಿಂತ ಹೆಚ್ಚಿನ ಮುಂಗಡ ಹಣವನ್ನು ಸಂಗ್ರಹಿಸುವುದಾಗಲಿ ಮಾಡಲು ಬರುವುದಿಲ್ಲ. ಹಾಗೆ ಮಾಡಿದಲ್ಲಿ ರೇರಾ ಕಾಯ್ದೆ ಕಲಂ 3 ನ್ನು ಉಲ್ಲಂಘಿಸಿದಂತಾಗುತ್ತದೆ. ಆದ್ದರಿಂದ ಈ ಮೂಲಕ ಎಲ್ಲಾ ಡೆವಲಪರ್/ ಏಜೆಂಟ್/ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ Acknowledgement Number ಮೇಲೆ ಯಾರೂ ಕೂಡ ವ್ಯವಹರಿಸಲು ಬರುವುದಿಲ್ಲ. ಪ್ರಾಧಿಕಾರಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪ್ರಾಧಿಕಾರವು ಪರಿಶೀಲಿಸಿ ಅನುಮೋದನೆ ನೀಡಿದಾಗ PRM/KA/RERA/Dist/Taluk/AG/Approved Date/No:.......... ಹಾಗೂ PRM/KA/RERA/Dist/ Taluk/ PR/Approved Date/No:........... ಎಂದು ಅನುಕ್ರಮವಾಗಿ ಡೆವಲಪರ್/ ಏಜೆಂಟರುಗಳಿಗೆ ನೋಂದಣಿ ಸಂಖ್ಯೆ ಕೊಡಲಾಗುವುದು. ಅದನ್ನು ಖಚಿತಪಡಿಸಿಕೊಂಡ ನಂತರವೇ ಸಾರ್ವಜನಿಕರು ವ್ಯವಹಾರ ಮಾಡಬೇಕಾಗಿರುತ್ತದೆ.

ಕಾರ್ಯದರ್ಶಿಗಳು
ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ಬೆಂಗಳೂರು